## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಕೃಷ್ಣಯ್ಯ ಆಚಾರ್, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮತ್ತು ಶ್ರೀ ಅಣ್ಣೇಗೌಡ, ಹಿಂದಿನ ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ-ಅಂತಿಮ ಆದೇಶ ಹೊರಡಿಸುವ ಬಗ್ಗೆ-ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/501/ಗ್ರಾಪಂಕಾ/2014 ದಿನಾಂಕ: 15–11–2014
2. ಅಪರ ನಿಭಂಧಕರು ವಿಚಾರಣೆಗಳು–1 ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK/INQ/14-A/615/2014/ARE-1 Dt:14-11-2016
3. ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ; LOK/INQ/14-A/615/2014/ARE-1 Dt:16-11-2016
4. ನಿಭಂಧಕರು ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಪತ್ರ ಸಂಖ್ಯೆ; LOK/INQ/14-A/615/2014/ARE-1 Dt:16-11-2016
5. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/841/ಗ್ರಾಪಂಕಾ/2015 ದಿನಾಂಕ: 19–12–2016.
6. ಶ್ರೀ ಕೃಷ್ಣಯ್ಯ ಆಚಾರ್ ಮತ್ತು ಶ್ರೀ ಅಣ್ಣೇಗೌಡ, ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ: 15–04–2017 ಮತ್ತು 20–01–2017

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಕೃಷ್ಣಯ್ಯ ಆಚಾರ್, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮತ್ತು ಶ್ರೀ ಅಣ್ಣೇಗೌಡ, ಹಿಂದಿನ ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14–ಎ ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು. ಅದರಂತೆ ಅಪರ ನಿಬಂಧಕರು ವಿಚಾರಣೆಗಳು–1, ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ"**

" ನೀವು ಶ್ರೀ ಕೃಷ್ಣಯ್ಯ ಆಚಾರ್, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮತ್ತು ಶ್ರೀ ಅಣ್ಣೇಗೌಡ, ಹಿಂದಿನ ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ 2008–09ನೇ ಸಾಲಿನಲ್ಲಿ ಬಿ.ಕಣಬೂರು ಗ್ರಾಮ ಪಂಚಾಯಿತಿಯಲ್ಲಿ ಟೆಂಡರ್ ಕರೆಯದೆ, ಕೊಟೇಷನ್ ಕ್ರಿಯಾಯೋಜನೆ ಇಲ್ಲದೆ ಕಾಮಗಾರಿಗಳನ್ನು ಮಾಡಿಸಿ ಗುತ್ತಿಗೆದಾರರಿಗೆ ಬಿಲ್ ಪಾವತಿಸಿರುತ್ತೀರಿ. ಗ್ರಾಮ ಪಂಚಾಯಿತಿ ವ್ಯಾಪ್ತಿಯ 36 ಅಂಗಡಿಗಳ ಪೈಕಿ ಎರಡು ಮಳಿಗೆಗಳಿಗೆ ಮಾತ್ರ ಹರಾಜು ಮಾಡಿಸಿ, ಉಳಿದ ಮಳಿಗೆಗಳನ್ನು ನಿಯಮ ಉಲ್ಲಂಘಿಸಿ ಪುನಃ 5 ವರ್ಷದ ಅವಧಿಗೆ ಹಾಲಿ ಬಾಡಿಗೆದಾರರಿಗೆ ನಿರ್ಣಯಿಸಿರುತ್ತೀರಿ. ಕಸ ವಿಲೇವಾರಿಗೆ ಮೀಸಲಿಟ್ಟ 5 ಎಕರೆ ಜಾಗ ಒತ್ತುವರಿಯಾಗಿರುವ ಬಗ್ಗೆ ದೂರು ನೀಡಿದರು ಕ್ರಮ ಕೈಗೊಳ್ಳದೆ ಸರ್ಕಾರಿ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ನಿಷ್ಠೆ ತೋರದೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮ 1966ರ ನಿಯಮ 3(1) ರನ್ವಯ ದುರ್ನಡತೆ ಎಸಗಿರುತ್ತೀರಿ."

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಕೃಷ್ಣಯ್ಯ ಆಚಾರ್, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮತ್ತು ಶ್ರೀ ಅಣ್ಣೇಗೌಡ, ಹಿಂದಿನ ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿ ಶ್ರೀ ಕೃಷ್ಣಯ್ಯ ಆಚಾರ್ ಮತ್ತು ಶ್ರೀ ಅಣ್ಣೇಗೌಡ ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಶ್ರೀ ಕೃಷ್ಣಯ್ಯ ಆಚಾರ್, ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 214(1)(ಎ)ರಡಿ ತಿಳಿಸಿರುವಂತೆ **"ಪಿಂಚಣಿಯ 5% ರಷ್ಟು ಮೊತ್ತವನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು"** ಮತ್ತು ಶ್ರೀ ಅಣ್ಣೇಗೌಡ, ಹಿಂದಿನ ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(iv)(a) ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ **"ಕಾಲಿಕ ವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವುದು, ಕೆಳಗಿನ ಹಂತಕ್ಕೆ ಇಳಿಸುವ ಅವಧಿಯಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ಪಡೆಯಲು ಅನರ್ಹರಿರುತ್ತಾರೆ"** ಎಂದು ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ ಈ ಸಂಬಂಧ ಶ್ರೀ ಕೃಷ್ಣಯ್ಯ ಆಚಾರ್, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮತ್ತು ಶ್ರೀ ಅಣ್ಣೇಗೌಡ, ಹಿಂದಿನ ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (5) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ಅನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅವರು ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ದಿನಾಂಕ: ದಿ: 15-04-2017 ಮತ್ತು 20-01-2017 ರ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ. ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

- ಶ್ರೀ ಕೃಷ್ಣಯ್ಯ ಆಚಾರ್ ರವರು ತಮ್ಮ ಸಮಜಾಯಿಷಿಯಲ್ಲಿ ತಾವು 22-05-2009 ರಂದು ಬಿ.ಕಣಬೂರು ಗ್ರಾ.ಪಂ ಗೆ ಕರ್ತವ್ಯಕ್ಕೆ ವರದಿಮಾಡಿಕೊಂಡಿದ್ದು ಸದರಿ ದೂರು ಅರ್ಜಿಯು 2008-09 ನೇ ಸಾಲಿಗೆ ಸಂಬಂಧಿಸಿರುತ್ತದೆ. 2008-09 ನೇ ಸಾಲಿನಲ್ಲಿ ಬಿ.ಕಣಬೂರು ಗ್ರಾ.ಪಂ ಯಲ್ಲಿ 2ನೇ ಎದರುದಾರರು ಕರ್ತವ್ಯದಲ್ಲಿದ್ದು ಸದರಿ ಲೋಪಗಳಿಗೆ ಅವರೆ ಜವಾಬ್ದಾರರಾಗಿರುತ್ತಾರೆಂದು ಆದ್ದರಿಂದ ನಿರಪರಾಧಿಯಾದ ನನ್ನನ್ನು ಆರೋಪಗಳಿಂದ ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ.

- ಶ್ರೀ ಶ್ರೀ ಅಣ್ಣೇಗೌಡ ರವರು ತಮ್ಮ ಸಮಜಾಯಿಷಿಯಲ್ಲಿ ವಿಚಾರಾಣಾಧಿಕಾರಿಗಳು ನಾವು ನೀಡಿದ ದಾಖಲೆಗಳನ್ನು ಪರಿಶೀಲಿಸದೆ ಕೇವಲ ದೂರುದಾರರ ದೂರಿನ ಮೇಲೆ ತಿರ್ಮಾನ ತೆಗೆದುಕೊಂಡಿದ್ದು, ಆರೋಪಗಳೆಲ್ಲ ನಿರಾಧರವೆಂದು ತಿಳಿಸಿ, ಆರೋಪಗಳನ್ನು ಅಲ್ಲಗಳೆದಿರುತ್ತಾರೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಪ್ರಮುಖವಾಗಿ ವರದಿಯ ಕಂಡಿಕೆ ಸಂಖ್ಯೆ 15 ಮತ್ತು 16 ರಲ್ಲಿ ಮೇಲ್ಕಂಡ ಅಂಶಗಳನ್ನು ಅಲ್ಲಗಳೆಯಲು ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ. ಅವುಗಳನ್ನು ಈ ಕೆಳಗಿನಂತೆ ಪುನರುಚ್ಚರಿಸಿದೆ.

15. It is alleged against the DGOs 1 and 2 that both of them while working as Secretary of B.Kanabur Grama Panchayath got executed some civil works without calling for tender and made payment to the contractors without getting the quotations, work plan and without floating tender during the year 2008-09. Absolutely no evidence is produced to show that the DGOs had executed any civil work or procured services from outside to the panchayath while they were working as Secretary of the panchayath. Further no evidence is produced to show that the DGOs made payment to the contractors after execution of the civil work or procuring services of third party to the panchayath without preparing plan and calling tender.

16. The evidence on record clearly shows that the DGOs No. 1 and 2 committed dereliction of duty in purchasing stationery required in B. Kanabur Grama Panchyath during the year 2008-09 for more than Rs.500/- without calling quotation from the suppliers. Therefore, the disciplinary authority has successfully established the charge framed against the DGOs 1 and 2 about they committing misconduct in purchase of stationery without calling quotations and hence I hold that both DGOs have committed official misconduct as defined under Rule 3 (i) to (iii) of the of the DCS (Conduct) Rules 1957, Further the disciplinary authority has clearly proved that DGO No. 1 while working as Secretary of B. Kanabur Grama Panchayath had failed to take action to auction 34 shops belonging to the panchayath and had allowed the old tenants to continue in the shops for lessor rent and thereby caused loss to the panchayath and therefore has has committed official misconduct as defined under Rule 3 (i) to (iii) of the KCS (Conduct) Rules 1957.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀವ್ರತೆಗೆ ಅನುಗುಣವಾಗಿ ಶ್ರೀ ಕೃಷ್ಣಯ್ಯ ಆಚಾರ್, ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ. ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 214(1)(ಎ)ರಡಿ ತಿಳಿಸಿರುವಂತೆ **"ಪಿಂಚಣಿಯ 5% ರಷ್ಟು ಮೊತ್ತವನ್ನು ಶಾಶ್ವತವಾಗಿ ತಡೆಹಿಡಿಯಿವ ದಂಡನೆಯನ್ನು"** ಮತ್ತು ಶ್ರೀ ಅಣ್ಣೇಗೌಡ, ಹಿಂದಿನ ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(iv)(a) ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ **"ಕಾಲಿಕ ವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವುದು, ಕೆಳಗಿನ ಹಂತಕ್ಕೆ ಇಳಿಸುವ ಅವಧಿಯಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ಪಡೆಯಲು ಅರ್ಹರಿರುತ್ತಾರೆ"** ಎಂದು ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತದೆ. ಆದುದರಿಂದ ಶ್ರೀ ಕೃಷ್ಣಯ್ಯ ಆಚಾರ್, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮತ್ತು ಶ್ರೀ ಅಣ್ಣೇಗೌಡ, ಹಿಂದಿನ ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರು 2ನೇ

ಕಾರಣ ಕೇಳುವ ನೋಟೀಸಿಗೆ ನೀಡಿರುವ ಆಕ್ಷೇಪಣೆಗಳನ್ನು ಒಪ್ಪಲು ಬರುವುದಿಲ್ಲ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಪರಿಶೀಲಿಸಿ ಶ್ರೀ ಕೃಷ್ಣಯ್ಯ ಆಚಾರ್, ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 214(1)(ಎ)ರಡಿ ತಿಳಿಸಿರುವಂತೆ **"ಪಿಂಚಣಿಯ 5% ರಷ್ಟು ಮೊತ್ತವನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು"** ಮತ್ತು ಶ್ರೀ ಅಣ್ಣೇಗೌಡ, ಹಿಂದಿನ ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(iv)(a) ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ **"ಕಾಲಿಕ ವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವುದು, ಕೆಳಗಿನ ಹಂತಕ್ಕೆ ಇಳಿಸುವ ಅವಧಿಯಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ಪಡೆಯಲು ಅರ್ಹರಿರುತ್ತಾರೆ"** ಎಂದು ದಂಡನೆ ವಿಧಿಸಲು ನಿರ್ಣಯಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 847 ಗ್ರಾಪಂಕಾ 2016 ಬೆಂಗಳೂರು, ದಿನಾಂಕ-11-07-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ಕೃಷ್ಣಯ್ಯ ಆಚಾರ್, ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 214(1)(ಎ)ರಡಿ ತಿಳಿಸಿರುವಂತೆ **"ಪಿಂಚಣಿಯ 5% ರಷ್ಟು ಮೊತ್ತವನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು"** ಮತ್ತು ಶ್ರೀ ಅಣ್ಣೇಗೌಡ, ಹಿಂದಿನ ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(iv)(a) ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ **"ಕಾಲಿಕ ವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವುದು, ಕೆಳಗಿನ ಹಂತಕ್ಕೆ ಇಳಿಸುವ ಅವಧಿಯಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ಪಡೆಯಲು ಅರ್ಹರಿರುತ್ತಾರೆ"** ಎಂದು ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ಪಿ. ಅರುಣ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿಕ್ಕಮಗಳೂರು ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ನರಸಿಂಪರಾಜಪುರ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ.
7. ಶ್ರೀ ಕೃಷ್ಣಯ್ಯ ಆಚಾರ್, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ
8. ಶ್ರೀ ಅಣ್ಣೇಗೌಡ, ಹಿಂದಿನ ಕಾರ್ಯದರ್ಶಿ, ಬಿ ಕಣಬೂರು ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇವರ ಮುಖಾಂತರ).
9. ಗಣಕ ಕೋಶ
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.